ಓ.ಎಸ್. ನಂ. 183/2020

ಪಿ.ಡಬ್ಲ್ಯು: 01 (ಮೂರ್ತೆಪ್ಪ)

ದಿನಾಂಕಃ 31.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ – ಶ್ರೀ SMS ವಕೀಲರಿಂದ.

ದಾವೆಯನ್ನು ಬಸಮ್ಮ ಎಂಬುವವರ ವಿರುದ್ಧ ಹೂಡಿರುತ್ತಾರೆ. ದಾವೆಯನ್ನು ಸರ್ವೆ ನಂಬರ್ 334 ವಿಸ್ತೀರ್ಣ 6.58 ಸೆಂಟ್ಸ ಮೇಲೆ ಸಲ್ಲಿಸಿರುತ್ತೇನೆ. ದಾವೆಯನ್ನು ನಾನು ದಾವಾ ಸ್ವತ್ತಿನ ಚೆಕ್‌ಬಂದಿಯಲ್ಲಿರುವ ಹೆಸರನ್ನು ಬರೆಸಿರುವುದಿಲ್ಲ, ಬದಲಿಗೆ ಸರ್ವೆ ನಂಬರ್ ಬರೆಸಿರುತ್ತೇನೆ. ದಾವಾ ಆಸ್ತಿ ಮೂಲಕ ವೆಟ್ಟಿ ನಿಂಗಪ್ಪ ಅವರಿಗೆ ಸೇರಿಸಿರುತ್ತದೆ. ಅವರ ಹೆಂಡತಿ ಹೆಸರು ಚೌಡಮ್ಮ. ಅವರಿಬ್ಬರ ಮಗಳ ಹೆಸರು ಬಸಮ್ಮ ಎಂದರೆ ಅವರಿಗೆ ಮಕ್ಕಳೇ ಆಗಿರುವುದಿಲ್ಲ. ನಾನು ಹೇಳುತ್ತಿರುವುದು ಸುಳ್ಳು, ಬಸಮ್ಮ ಒಬ್ಬಳೇ ಅವರ ಮಗಳು, ಆ ವಿಚಾರ ನನಗೆ ಗೊತ್ತಿದ್ದರು ಆಸ್ತಿ ಹೊಡೆಯುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬಸಮ್ಮ ಅಜ್ಜಪ್ಪನ ಮಗಳು. ನಾನು ಹೇಳುತ್ತಿರುವ ಬಸಮ್ಮ ತಂದೆ ಅಜ್ಜಪ್ಪ ಮತ್ತು ಪ್ರತಿವಾದಿ ಬಸಮ್ಮ ಬೇರೆ ಬೇರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವೆಟ್ಟಿ ನಿಂಗಪ್ಪನಿಗೆ ಮಕ್ಕಳೇ ಆಗಿರಲಿಲ್ಲ.

ವೆಟ್ಟಿ ನಿಂಗಪ್ಪ ಮತ್ತು ಚೌಡಮ್ಮ ಅವರ ಮಗಳು ಬಸಮ್ಮಳನ್ನು ಗುಡ್ಡಪ್ಪನಿಗೆ ಮದುವೆ ಮಾಡಿಕೊಟ್ಟಿರುವ ವಿಚಾರ ನನಗೆ ಗೊತ್ತಿದೆಯೇ ಎಂದರೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಮ್ಮ ದೊಡ್ಡಮ್ಮ ಯಾವುದೇ ಮದುವೆ ಮಾಡಿಕೊಟ್ಟಿರುವುದಿಲ್ಲ ಎಂದು ಹೇಳಿರುತ್ತಾರೆ.

ವೆಟ್ಟಿ ನಿಂಗಪ್ಪ ಮೃತಪಟ್ಟು 40 ವರ್ಷಗಳ ಮೇಲಾಗಿರುತ್ತದೆ. ವೆಟ್ಟಿ ನಿಂಗಪ್ಪ ತೀರಿಕೊಳ್ಳುವವರೆಗೆ ಅವರೇ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದರು ಎಂದರೆ ಹೌದು. ಆತ ಮೃತಪಟ್ಟ ನಂತರ ಚೌಡಮ್ಮ ಹಾಗೂ ಆತನ ಮಗಳಾದ ಬಸಮ್ಮ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದರು ಎಂದರೆ ಚೌಡಮ್ಮ ಅವರಿಗೆ ಮಕ್ಕಳೇ ಆಗಿರಲಿಲ್ಲ. ವೆಟ್ಟಿ ನಿಂಗಪ್ಪ ಮೃತಪಟ್ಟ ನಂತರ ದಾವಾ ಆಸ್ತಿಗಳು ಚೌಡಮ್ಮ ಅವರ ಹೆಸರಿಗೆ ಬಂದಿರುತ್ತವೆ. ಸದರಿ ಆಸ್ತಿ ಚೌಡಮ್ಮ ಅವರ ಹೆಸರಿಗೆ ಎಷ್ಟನೇ ಇಸವಿಯಲ್ಲಿ ಬಂದಿರುತ್ತದೆ ಎಂದರೆ ತೀರಿಕೊಂಡ ನಂತರ ಬಂದಿರುತ್ತವೆ. ಚೌಡಮ್ಮ 2017 ರಲ್ಲಿ ಮೃತಪಟ್ಟಿರುತ್ತಾರೆ. ಚೌಡಮ್ಮ ಮೃತಪಟ್ಟ ನಂತರ ಆಕೆಯ ಮಗಳಾದ ಬಸಮ್ಮ ಅವರೇ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದರೇ ಎಂದರೆ ನಾವೇ ಮಾಡುತ್ತಿದ್ದೇವೆ.

ವೆಟ್ಟಿ ನಿಂಗಪ್ಪ ಮತ್ತು ಚೌಡಮ್ಮರವರಿಗೂ ಹಾಗೂ ಅವರ ಆಸ್ತಿಗೂ ಮತ್ತು ನನಗೂ ಸಂಬಂಧ ಇಲ್ಲ ಎಂದರೆ ಅವರು ದೊಡ್ಡಪ್ಪ ಮತ್ತು ದೊಡ್ಡಮ್ಮ. ನಮಗೂ ಅವರಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರು ಆಸ್ತಿ

ಹೊಡೆಯುವ ಸಲುವಾಗಿ ಸುಳ್ಳು ಸಂಬಂಧ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಚೌಡಮ್ಮ ಮೃತಪಡುವವರೆಗೂ ಬಸಮ್ಮ ಅವರೇ ನೋಡಿಕೊಳ್ಳುತ್ತಿದ್ದರು ಎಂದರೆ ನಾವೇ ನೋಡಿಕೊಳ್ಳುತ್ತಿದ್ದೆವು.

ನನ್ನ ತಾಯಿಯ ಹೆಸರು ದೇವಿರಮ್ಮ. ಅವರು ದೇವದಾಸಿ ಎಂದರೆ ಹೌದು. ನಾನು, ನನ್ನ ತಾಯಿ ಚೌಡಮ್ಮ ಅವರನ್ನು ನೋಡಿಕೊಳ್ಳುತ್ತಿದ್ದೆವು ಎಂಬುದು ಎಲ್ಲ ಸುಳ್ಳು ಎಂದರೆ ಸರಿಯಲ್ಲ. ನಾನೇ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದೇನೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ದಾವಾ ಆಸ್ತಿ ನನ್ನ ಹೆಸರಿಗೆ ಹೇಗೆ ಬಂತು ಎಂದರೆ ಚೌಡಮ್ಮ ನನಗೆ ಮರಣ ಶಾಸನವನ್ನು ಬರೆದುಕೊಟ್ಟಿರುತ್ತಾರೆ. ಚೌಡಮ್ಮ ಅವರಿಗೆ ಓದಲು ಬರೆಯಲು ಬರುತ್ತಿರಲಿಲ್ಲ ಎಂದರೆ ಹೌದು. ಆದ ಕಾರಣ ನಾನು ಕಂದಾಯ ಅಧಿಕಾರಿಗಳೊಂದಿಗೆ ಶಾಮಿಲಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಮನಪೂರ್ವಕವಾಗಿ ಅದನ್ನು ಚೌಡಮ್ಮ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಅದು ಸುಳ್ಳು ಮರಣ ಶಾಸನವಾದ ಕಾರಣ ಅದರಿಂದ ನಮಗೆ ಯಾವುದೇ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ.

ನಾನು ಖಾತಾ ವರ್ಗಾವಣೆ ಮಾಡಿಕೊಂಡಿರುವುದನ್ನು ಪ್ರಶ್ನಿಸಿ ಪ್ರತಿವಾದಿ ಎಸಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಹೌದು. ಎಸಿ ನ್ಯಾಯಾಲಯದಲ್ಲಿ ಚೌಡಮ್ಮ ಅವರ ಹೆಸರಿಗೆ ಖಾತೆ ಮಾಡಲು ಆದೇಶ ಮಾಡಿರುತ್ತಾರೆ ಎಂದರೆ ಹೌದು. ಈಗಲೂ ಸಹ ಅದು ಚೌಡಮ್ಮ ಅವರ ಹೆಸರಿನಲ್ಲಿದೆ ಎಂದರೆ ಹೌದು. ಎಸಿ ನ್ಯಾಯಾಲಯದಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಲು ಹೇಳಿರುತ್ತಾರೆ. ಅದರಲ್ಲಿ ನಾವು ಬಸಮ್ಮ ಅಜ್ಜಪ್ಪ ಅವರ ಮಗಳು ಎಂದು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂಬ ಕಾರಣಕ್ಕೆ ಮತ್ತು ಚೌಡಮ್ಮನ ಮಗಳು ಬಸಮ್ಮ ಎಂಬ ಕಾರಣಕ್ಕೆ ಆ ರೀತಿ ಆದೇಶ ಮಾಡಿರುತ್ತಾರೆ ಹಾಗೂ ಸಿವಿಲ್ ನ್ಯಾಯಾಲಯಕ್ಕೆ ಹೋಗಲು ಹೇಳಿರುತ್ತಾರೆ.

ಆಸ್ತಿ ಕಬಳಿಸುವ ಉದ್ದೇಶದಿಂದ ಅವರನ್ನು ನಂಬಿಸಿ ಮೋಸ ಮಾಡುವ ಉದ್ದೇಶದಿಂದ ಅದರಲ್ಲಿ ಆಕೆಗೆ ಯಾವುದೇ ಮಕ್ಕಳಿಲ್ಲ ಎಂದು ಬರೆಯಿಸಿ ಅವರ ಸಹಿಯನ್ನು ಪಡೆದಿರುತ್ತೇವೆ, ಅದನ್ನು ಅವರು ಮನಪೂರ್ವಕವಾಗಿ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 11 ಸೃಷ್ಟಿ ಮಾಡಿದ ದಾಖಲಾತಿಯಾದ ಕಾರಣ ಅದು ಕಾನೂನಿನ ಪ್ರಕಾರ ಊರ್ಜಿತವಲ್ಲ ಎಂದರೆ ಸರಿಯಲ್ಲ. ಅದು ಪ್ರತಿವಾದಿಗೆ ಬಂಧನಕಾರಿಯಾಗುವುದಿಲ್ಲ ಎಂದರೆ ಸರಿಯಲ್ಲ. ಅದರಲ್ಲಿ ಸಾಕ್ಷಿದಾರರಾಗಿರುವ ಚಂದ್ರಮ್ಮ ನಮ್ಮ ಅಕ್ಕ ಆಗಿರುತ್ತಾರೆ, ಉಳಿದವರು ನಮ್ಮ ಊರಿನವರು. ಅವರೊಂದಿಗೆ ನಾನು ಸೇರಿಕೊಂಡು ನಿಪಿ 11 ನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು

ಓ.ಎಸ್. ನಂ. 183/2020

ಪಿ.ಡಬ್ಲ್ಯೂ: 01 (ಮೂರ್ತೆಪ್ಪ)

ಹಾಜರುಪಡಿಸಿರುವ ನಿಪಿ 12 ರಲ್ಲಿ ಬಸಮ್ಮ ಗಂಡ ಗುಡ್ಡಪ್ಪ ಎಂದು ಇದ್ದು ಅವರು ವೆಟ್ಟಿ ನಿಂಗಪ್ಪನ ಮಗಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದರಲ್ಲಿ ತಂದೆಯ ಹೆಸರು ಮೂರು ಬಾರಿ ಬದಲು ಮಾಡಿ ಬರೆಸಿರುತ್ತಾರೆ. ಸಾಕ್ಷಿ ಮುಂದುವರೆದು ಬಸಮ್ಮ ಗುಡ್ಡಪ್ಪ ಎಂಬುವವರೊಂದಿಗೆ ದೇವದಾಸಿಯಾಗಿದ್ದರು.

ನಿಪಿ 12 ರಲ್ಲಿ ಇರುವ ಬಸಮ್ಮ ತಂದೆ ಅಜ್ಜಪ್ಪ ಅವರೇ ಬೇರೆ ಹಾಗೂ ವೆಟ್ಟಿ ನಿಂಗಪ್ಪನ ಮಗಳಾದ ಬಸಮ್ಮಳೇ ಬೇರೆ ಎಂದರೆ ಹೌದು. ಒಂದು ಗ್ರಾಮದಲ್ಲಿ ಹಲವಾರು ಜನ ಬಸಮ್ಮ ಇರುತ್ತಾರೆ ಎಂದರೆ ಹೌದು. ನನ್ನ ವಂಶಕ್ಕೂ ಚೌಡಮ್ಮ ಅವರ ವಂಶಕ್ಕೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚೌಡಮ್ಮ ನಮ್ಮ ದೊಡ್ಡಮ್ಮ ಎಂದು ತೋರಿಸಲು ಯಾವುದಾದರೂ ದಾಖಲಾತಿ ಹಾಜರುಪಡಿಸಿದ್ದೇನೆಯೇ ಎಂದರೆ ಇಲ್ಲ. ಬಸಮ್ಮ ಅವರು ಅವರ ಕುಟುಂಬದ ವಂಶವೃಕ್ಷ ತೆಗೆದುಕೊಂಡ ಬಗ್ಗೆ ನನಗೆ ಗೊತ್ತಿದೆಯೇ ಎಂದರೆ ಸಾಕ್ಷಿ ಯಾವುದೇ ಉತ್ತರ ಕೊಟ್ಟಿರುವುದಿಲ್ಲ. ಬಸಮ್ಮ ವೆಟ್ಟಿ ನಿಂಗಪ್ಪನ ಮತ್ತು ಚೌಡಮ್ಮಳ ಮಗಳು ಎಂದು ಗೊತ್ತಿದ್ದರು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ವಿಲ್ಲಿನ ಆಧಾರದ ಮೇಲೆ ಯಾವುದೇ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಕಬಳಿಸುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.